# ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ: ಕೇಂದ್ರ ಕಛೇರಿ: ಬೆಂಗಳೂರು

ಕೇಂದ್ರ ಕಛೇರಿ : : ಸಾರ್ವಜನಿಕ ಸಂಪರ್ಕಾಧಿಕಾರಿ ಶಾಖೆ : : ಬೆಂಗಳೂರು-೨೭

ಸಂಖ್ಯೆ:ಬೆಂಮನಸಾ/ಕೇಕ/ಸಾಸಂಇ / 66 /2019-20 ದಿನಾಂಕ: 15.05.2019

**ಸಂಪಾದಕರು,**
ಬೆಂಗಳೂರು.

**"ಪತ್ರಿಕಾ ಪ್ರಕಟಣೆ"**

ಮಾನ್ಯರೇ,

ವಿಷಯ: ೨೦೧೯-೨೦ನೇ ಸಾಲಿನ ವಿದ್ಯಾರ್ಥಿ ರಿಯಾಯಿತಿ ಪಾಸಿನ ಸೌಲಭ್ಯ ಪಡೆಯಲು ಶಿಕ್ಷಣ ಸಂಸ್ಥೆಯವರು ನೋಂದಣಿ ಮಾಡಿಕೊಳ್ಳುವ ಬಗ್ಗೆ.

**********

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯು ೨೦೧೮-೧೯ನೇ ಸಾಲಿನಲ್ಲಿ ವಿದ್ಯಾರ್ಥಿ ಪಾಸಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಸ್ವೀಕರಿಸಿ ಸ್ಮಾರ್ಟ್‌ಕಾರ್ಡ್ ಮಾದರಿಯ ಪಾಸುಗಳನ್ನು ವಿತರಣೆ ಮಾಡಿರುತ್ತದೆ. ಅದರಂತೆ ೨೦೧೯-೨೦ ನೇ ಸಾಲಿನಲ್ಲಿಯೂ ಸಹ ವಿದ್ಯಾರ್ಥಿ ಪಾಸಿಗಾಗಿ ಆನ್‌ಲೈನ್ ಮೂಲಕ ಅರ್ಜಿ ಸ್ವೀಕರಿಸಿ, ಸ್ಮಾರ್ಟ್‌ಕಾರ್ಡ್ ಮಾದರಿಯ ಪಾಸುಗಳನ್ನು ವಿತರಣೆ ಮಾಡಲು ಕ್ರಮಕೈಗೊಳ್ಳಲಾಗಿದೆ.

ವಿದ್ಯಾರ್ಥಿ ಪಾಸು ವಿತರಣೆಯ ಸಂಬಂಧ ಶಿಕ್ಷಣ ಸಂಸ್ಥೆಯು ಓರ್ವ ನೋಡಲ್ ಅಧಿಕಾರಿಯನ್ನು ನೇಮಿಸುವುದು ಹಾಗೂ ವಿದ್ಯಾರ್ಥಿಗಳು ವಿದ್ಯಾರ್ಥಿ ಪಾಸಿಗಾಗಿ ಆನ್‌ಲೈನ್ ಮೂಲಕ ಸಲ್ಲಿಸಿದ ಅರ್ಜಿಗಳನ್ನು ಶಿಕ್ಷಣ ಸಂಸ್ಥೆಯ ನೋಡಲ್ ಅಧಿಕಾರಿಗಳು ಪರಿಶೀಲಿಸಿ ಅನುಮೋದಿಸುವುದು ಕಡ್ಡಾಯವಾಗಿರುತ್ತದೆ. ಆದ್ದರಿಂದ ವಿದ್ಯಾರ್ಥಿ ಪಾಸಿನ ಅರ್ಜಿಗಳನ್ನು ನೋಡಲ್ ಅಧಿಕಾರಿಗಳು ಪರಿಶೀಲಿಸಲು ಅನುವಾಗುವಂತೆ ಶಿಕ್ಷಣ ಸಂಸ್ಥೆಯ ಹಾಗೂ ನೋಡಲ್ ಅಧಿಕಾರಿಗಳ ಮಾಹಿತಿಯನ್ನು ಬೆಂ.ಮ.ಸಾ.ಸಂಸ್ಥೆಗೆ ಒದಗಿಸಬೇಕಾಗಿರುತ್ತದೆ.

ತತ್ಸಂಬಂಧ ಎಲ್ಲಾ ಶಿಕ್ಷಣ ಸಂಸ್ಥೆಯವರು (೧ ರಿಂದ ೧೦ನೇ ತರಗತಿಯವರೆಗೂ ರಾಜ್ಯ ಪಠ್ಯಕ್ರಮ ಹೊಂದಿದ ಶಾಲೆಗಳನ್ನು ಹೊರತುಪಡಿಸಿ) ಬೆಂ.ಮ.ಸಾ.ಸಂಸ್ಥೆಯ ವೆಬ್‌ಸೈಟ್ www.mybmtc.com / www.mybmtc.karnataka.gov.in ನಲ್ಲಿ ವಿದ್ಯಾರ್ಥಿ ಪಾಸನ್ನು ಆಯ್ಕೆ ಮಾಡಿಕೊಂಡು ನಂತರ ಶಿಕ್ಷಣ ಸಂಸ್ಥೆಯ ನೋಂದಣಿ (**institute Registration**) ಯನ್ನು ಆಯ್ಕೆ ಮಾಡಿಕೊಂಡು ಎಲ್ಲಾ ಮಾಹಿತಿಗಳನ್ನು ಭರ್ತಿ ಮಾಡಿ ಸಲ್ಲಿಸುವಂತೆ ಕೋರಲಾಗಿದೆ. ಅಲ್ಲದೇ, ನೋಂದಣಿಯಾದ ಶಿಕ್ಷಣ ಸಂಸ್ಥೆ ಮಾತ್ರ ಪಾಸಿನ ಅರ್ಜಿಯನ್ನು ಅನುಮೋದನೆ ಮಾಡಬಹುದಾಗಿರುತ್ತದೆ ಹಾಗೂ ನೋಂದಣಿಗೆ ಅರ್ಜಿ ಸಲ್ಲಿಸುವ ಪ್ರಕ್ರಿಯೆಯು ದಿನಾಂಕ: ೧೫.೦೫.೨೦೧೯ ರಿಂದ ಪ್ರಾರಂಭವಾಗಲಿದೆ.
ಈ ಮೇಲಿನ ವಿಷಯವನ್ನು ತಮ್ಮ ಜನಪ್ರಿಯ ದಿನಪತ್ರಿಕೆಯಲ್ಲಿ ಶಿಕ್ಷಣ ಸಂಸ್ಥೆಯ ಮಾಹಿತಿಗಾಗಿ ಪ್ರಕಟಿಸಲು ಕೋರಲಾಗಿದೆ.

**ವಂದನೆಗಳೊಂದಿಗೆ,**

ತಮ್ಮ ವಿಶ್ವಾಸಿ,
ಸಹಿ/-

**ಸಾರ್ವಜನಿಕ ಸಂಪರ್ಕಾಧಿಕಾರಿ**
**ಬೆಂ.ಮ.ಸಾ.ಸಂಸ್ಥೆ**